**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸ್ಪೆಷಲ್ ಕೇಸ್ ನಂಬ್ರ 124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ರವೀಂದ್ರಕುಮಾರ್ ಟಿ.ವಿ.** | ಪ್ರಾಸಾಃ 27 |
| ತಂದೆಯ ಹೆಸರು | : | ಟಿ. ವೆಂಕಟರತ್ನಂ | ಚಾಸಾಃ 78 |
| ಪ್ರಾಯ | : | 50 ವರ್ಷ | **ದಿನಾಂಕಃ 27.03.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು. | |
| ವಾಸಸ್ಥಳ | : | ಬೆಂಗಳೂರು. | |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ**

ನಾನು ನವೆಂಬರ್-2017 ರಿಂದ ಮೇ-2022 ರ ತನಕ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಸಿ. ರೋಡ್ ಶಾಖೆಯಲ್ಲಿ ಮುಖ್ಯ ಪ್ರಬಂಧಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸಿಬಿ ಪೊಲೀಸರು, ದಿನಾಂಕಃ 12.02.2018 ರಂದು ಪತ್ರ ಬರೆದು ಆರೋಪಿಗಳಿಗೆ ಸಂಬಂಧಿಸಿದ ಲೋನ್ ಖಾತೆಯ ಮಾಹಿತಿಯನ್ನು ಕೋರಿರುತ್ತಾರೆ. ಅದರಂತೆ ನಾನು ದಿನಾಂಕಃ 14.02.2018 ರಂದು ಸದ್ರಿ ಮಾಹಿತಿಯನ್ನು ಸಲ್ಲಿಸಿರುತ್ತೇನೆ. ನಾನು ನೀಡಿದ ಮಾಹಿತಿಯ ದಾಖಲೆಯನ್ನು ಈಗ ನೋಡುತ್ತಿದ್ದು, ಅವುಗಳನ್ನು ಒಟ್ಟಾಗಿ **ನಿ.ಪಿ.121 ಮತ್ತು ನಿ.ಪಿ.122** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-121(ಎ) ಮತ್ತು ನಿ.ಪಿ.122(ಎ) ಎಂದು ಗುರುತಿಸಲಾಯಿತು.

3. ಆ ರೀತಿ 1ನೇ ಆರೋಪಿಯು ರೂ.3,95,000/- ವೈಯಕ್ತಿಕ ಸಾಲವನ್ನು ಪಡೆದಿರುತ್ತಾರೆ ಮತ್ತು ಆ ಸಾಲ ಮರುಪಾವತಿಯಾಗಿದೆ. ಸದ್ರಿ ವೈಯಕ್ತಿಕ ಸಾಲಕ್ಕೆ ಶೇಕಡಾ 14.8 ರಂತೆ ರೂ.79,256/- ಬಡ್ಡಿ ಪಡೆದಿರುತ್ತೇವೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ವಕೀಲರಿಂದಃ**

ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.